೫. ದಿನಾಂಕ: 1-3-92 ರಿಂದ 31-1-1993 ರವರೆಗೆ 156.10. ಕೋಟಿ.

ಈ. ಸಾರಿಗೆ ಇಲಾಖಾವತಿಯಿಂದ ಮಹಾನಗರ ಪಾಲಿಕೆಗೆ ನೇರವಾಗಿ ಯಾವ ಪರಿಹಾರಧನವನ್ನು ಕೊಡಲಾಗುತ್ತಿಲ್ಲ.

ಸರ್ಕಾರಿ ವಾಹನಗಳ ಸಂಖ್ಯೆ

1303 (683): ಶ್ರೀ ವೈ. ಕೆ. ರಾಮಯ್ಯ, (ಕುಣಿಗಲ್):-

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರ ಹಾಗೂ ಸರ್ಕಾರದ ಉದ್ಯಮಗಳ ಮತ್ತು ಸಂಸ್ಥೆಗಳ ಅಧಿಕಾರಿಗಳು ಹಾಗೂ ಇತರರ ಉಪಯೋಗಕ್ಕಾಗಿ ಇರುವ ವಾಹನಗಳ (ಕಾರು, ಜೀಪು, ಇತ್ಯಾದಿ) ಸಂಖ್ಯೆ ಎಷ್ಟು;

ಆ) ಈ ವಾಹನಗಳ ನಿರ್ವಹಣೆಗಾಗಿ ವಾರ್ಷಿಕವಾಗಿ ಸರ್ಕಾರ ಖರ್ಚು ಮಾಡುತ್ತಿರುವ ಮೊತ್ತ ಎಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):-

ಅ. 14,037.

ಆ. ಸುಮಾರು ರೂ.27.17 ಕೋಟಿಗಳು.

ಕೆ.ಎಸ್.ಆರ್.ಟಿ.ಸಿಯಲ್ಲಿ ಕೆಲಸ ಮಾಡುವ ಸಿಬ್ಬಂದಿ

1304 (684): ಶ್ರೀ ವೈ.ಕೆ. ರಾಮಯ್ಯ, (ಕುಣಿಗಲ್):-

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೆ.ಎಸ್.ಆರ್.ಟಿ.ಸಿ.ಯಲ್ಲಿರುವ ಬಸ್ಗಳ ಸಂಖ್ಯೆ ಎಷ್ಟು (ಬಿ.ಟಿ.ಎಸ್. ಸೇರಿದಂತೆ);

ಆ. ಈ ಸಂಸ್ಥೆಯ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ಮತ್ತು ನೌಕರರ ಸಂಖ್ಯೆ ಎಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಅ. ಒಟ್ಟು 9527 ಬಸ್ಸುಗಳು.

ಆ. ಈ ಸಂಸ್ಥೆಯ ವಿವಿಧ ಇಲಾಖೆಗಳಲ್ಲಿ 58,537 ಜನ ಅಧಿಕಾರಿಗಳು ಮತ್ತು ನೌಕರರು ಕೆಲಸವನ್ನು ಮಾಡುತ್ತಿರುವರು.

ಕೆ.ಎಸ್.ಆರ್.ಟಿ.ಸಿ. ವಾಹನ ಚಾಲಕರಿಂದ ಆದ ಅಪಘಾತಗಳ ಸಂಖ್ಯೆ

1305 (654): ಶ್ರೀ ವೈ.ಕೆ. ರಾಮಯ್ಯ, (ಕುಣಿಗಲ್):-

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992-93ನೇ ವರ್ಷದಲ್ಲಿ ಕ.ರಾ.ರ.ಸಾ ಸಂಸ್ಥೆಯಲ್ಲಿ ವಾಹನದ ಚಾಲಕರುಗಳಿಂದ ಆದ ಅಪಘಾತಗಳ ಸಂಖ್ಯೆ ಎಷ್ಟು;